**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯದಲ್ಲಿ, ಶಿಕಾರಿಪುರ,**

**ಸಿ.ಸಿ.ನಂಃ 2813/2025**

**ಸರಕಾರ** ಃ ಶಿಕಾರಿಪುರ ಗ್ರಾಮಾಂತರ ಪೋಲಿಸ್.

**ವಿರುದ್ಧ**

**ಆರೋಪಿತರು** ಃ ಶಂಕ್ರನಾಯ್ಕ.

## ದೋಷಾರೋಪಣೆ

ರಶ್ಮಿ ಎಸ್., ಬಿ.ಎ.ಎಲ್., ಎಲ್.ಎಲ್.ಬಿ., ಎಂ.ಎ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಆದ ನಾನು

**ಇವರ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುವುದೇನೆಂದರೆಃ**

ಶಿಕಾರಿಪುರ ತಾಲ್ಲೂಕು ಬೇಗೂರು ಗ್ರಾಮದ ಸರ್ವೆ ನಂಬರ್ **1221** ಮತ್ತು **1222** ರಲ್ಲಿ ಸಾಕ್ಷಿ **1** ರವರ ಹೆಸರಿಗೆ **1** ಎಕರೆ **34** ಗುಂಟೆ ಜಮೀನು ಇದ್ದು ಹಾಗೂ ಆರೋಪಿತರಾದ ನಿಮ್ಮ ಹೆಸರಿಗೆ **3** ಎಕರೆ ಜಮೀನು ಇದ್ದು**,** ಆರೋಪಿತರಾದ ನೀವು ಸಾಕ್ಷಿ **1** ರವರಿಗೆ ಸೇರಿದ ಜಮೀನಿನಲ್ಲಿ ಸ್ವಲ್ಪ ಜಮೀನನ್ನು ಒತ್ತುವರಿ ಮಾಡಿಕೊಂಡು ಅಡಿಕೆ ಸಸಿ ಹಚ್ಚಿದ ವಿಚಾರದ ಬಗ್ಗೆ ಸಾಕ್ಷಿ **1** ರವರು ದಿಃ **10-06-2025** ರಂದು ಸಂಜೆ **7.20** ಗಂಟೆಗೆ ನಿಮ್ಮನ್ನು ಪ್ರಶ್ನಿಸಿದಾಗ ನೀವು ಸಾಕ್ಷಿ **1** ರವರಿಗೆ ಸೂಳೇ ಮಗನೇ ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಇದರಿಂದ ಅವರಿಗೆ ಅವಮಾನವಾಗಿ ಅವರು ಪ್ರಚೋದನೆಗೂಳ್ಳುತ್ತಾರೆಂದು ತಿಳಿದು ಈ ರೀತಿ ಬೈದು ಭಾರತೀಯ ನ್ಯಾಯ ಸಂಹಿತೆ ಕಲಂ. 352 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೇಯದಾಗಿ**,** ಮೇಲೆ ಹೇಳಿದ ದಿನಾಂಕ**,** ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ವಿಷಯವಾಗಿ ಕಬ್ಬಿಣದ ರಾಡಿನಿಂದ ಸಾಕ್ಷಿ. **1** ರವರ

ಎಡಗೈಗೆ ಮತ್ತು ತಲೆಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟುಮಾಡಿ ಭಾರತೀಯ ನ್ಯಾಯ ಸಂಹಿತೆ ಕಲಂ. **118(2)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ ಃ 29-04-2026

(ರಶ್ಮಿ ಎಸ್.)
ಪ್ರ.ದ. ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಶಿಕಾರಿಪುರ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಶಿಕಾರಿಪುರ,

**ಸಿ.ಸಿ.ನಂಃ 2813/2025**

**ಸರಕಾರ** ಃ ಶಿಕಾರಿಪುರ ಗ್ರಾಮಾಂತರ ಪೋಲಿಸ್.

**ವಿರುದ್ಧ**

**ಆರೋಪಿತರು** ಃ ಶಂಕ್ರನಾಯ್ಕ.

## ದೋಷಾರೋಪಣೆ

**ಪ್ರಶ್ನೆಃ 1.** ಈ ಮೇಲೆ ಹೇಳಿದ ದೋಷರೋಪಣೆ ನಿಮಗೆ ತಿಳಿಯಿತೆ?

ಉತ್ತರಃ

**ಪ್ರಶ್ನೆಃ 2.** ದೋಷರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸುವಿರೋ?

ಉತ್ತರಃ

(ಈ ಮೇಲಿನ ದೋಪಷರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ, ಅವರು ನೀಡಿದ ವಿವರಣೆಯನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ)

(**ಶ್ರೀಮತಿ ರಶ್ಮಿ ಎಸ್.**)
ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿ, ಶಿಕಾರಿಪುರ.